**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಓ.ಎಸ್. ನಂಃ 07/2024**

**ಪಿಡಬ್ಲ್ಯೂ – 1**

**ಸಾಕ್ಷಿಯು ದಿಃ 09.04.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ**

ನಾನು 2ನೇ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಯಿಸಿ ತಿಳಿದುಕೊಂಡಿರುತ್ತೇನೆ ಹಾಗೂ ಈ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ. ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ. ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

ವಂಶವೃಕ್ಷದ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ 1 ಎಂದು, ಪಹಣಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 2 ಎಂದು, ಮ್ಯೂಟೇಷನ್ ನ ದೃಡಿಕ್ರತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 3 ಎಂದು, ಹಕ್ಕು ಬದಲಾವಣೆ ವಹಿಯ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 4 ಎಂದು, ಪಹಣಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ, ಅವುಗಳನ್ನು ನಿಪಿ 5 ಮತ್ತು 6 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳು ಏಕತರಪೀಯವಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ